# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ನಬಾರ್ಡ್ ನೆರವಿನ ಆರ್.ಐ.ಡಿ.ಎಫ್.-24 ರ ಯೋಜನೆಯಡಿ ಮೀನುಗಾರಿಕೆ ಇಲಾಖೆಗೆ ನಬಾರ್ಡ್‌ನಿಂದ ಅನುಮೋದಿಸಲ್ಪಟ್ಟಿರುವ ಕಾಮಗಾರಿಗಳ ಅನುಷ್ಠಾನಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- (1) ನಬಾರ್ಡ್ ಪತ್ರ ಸಂಖ್ಯೆ: NB(KA.RO)/SPD/4318/ RIDF-06/2018-19, ದಿನಾಂಕ: 15-02-2019.

(2) ಪತ್ರ ಸಂಖ್ಯೆ: ಮೀನಿ/08/ಆರ್‌ಐಡಿ/2018, ದಿನಾಂಕ: 22-02-2018 ಮತ್ತು 28-02-2019

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದಲ್ಲಿ, ಆರ್.ಐ.ಡಿ.ಎಫ್.-24 ರಡಿ ಮೀನುಗಾರಿಕೆ ಇಲಾಖೆಯ ರೂ.2576.50 ಲಕ್ಷಗಳ ವೆಚ್ಚದ 16 ಕಾಮಗಾರಿಗಳಿಗೆ ಅನುಮೋದನೆ ನೀಡಿ ಒಂದು ತಿಂಗಳೊಳಗೆ, ಆಡಳಿತಾತ್ಮಕ ಮಂಜೂರಾತಿ ಪಡೆಯುವಂತೆ ತಿಳಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, ನಬಾರ್ಡ್‌ನಿಂದ ಅನುಮೋದಿಸಲ್ಪಟ್ಟಿರುವ 16 ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಕಾಲ ಮಿತಿ ನೀಡಿರುವ ಕಾರಣ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ತಕ್ಷಣದಿಂದಲೇ ಸೂಕ್ತ ಕ್ರಮ ವಹಿಸಬೇಕಾಗಿರುತ್ತದೆ. ಆದುದರಿಂದ, ಸದರಿ 16 ಕಾಮಗಾರಿಗಳ ವಿವರವಾದ ಪಟ್ಟಿಯನ್ನು ಹಾಗೂ ಅಂದಾಜು ಪಟ್ಟಿಯನ್ನು ಸಲ್ಲಿಸುತ್ತಾ, ಈ 16 ಕಾಮಗಾರಿಗಳಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 123 ಮೀಇಯೋ 2018, ಬೆಂಗಳೂರು ದಿನಾಂಕ: 02-03-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಬಾರ್ಡ್ ನೆರವಿನ ಆರ್‌ಐಡಿಎಫ್-24ರ ಯೋಜನೆಯಡಿ ರೂ.2576.50 ಲಕ್ಷ (ಎರಡು ಸಾವಿರದ ಐದುನೂರ ಎಪ್ಪತ್ತಾರು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ)ಗಳ ಅಂದಾಜು ವೆಚ್ಚದಲ್ಲಿ ಕೆಳಕಂಡ 16 ಕಾಮಗಾರಿಗಳ ಪೈಕಿ ಕ್ರಮ ಸಂಖ್ಯೆ 14, 15 ಮತ್ತು 16 ರಲ್ಲಿರುವ ಕಾಮಗಾರಿಗಳನ್ನು ರಾಜ್ಯ

ಸರ್ಕಾರದ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರಿಂದ, ಕ್ರ. ಸಂ. 1, 2, 3, 5, 6, 8 ರಲ್ಲಿರುವ ಕಾಮಗಾರಿಗಳನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿ. ಬೆಂಗಳೂರು ರವರ ಮೂಲಕ ಕೈಗೊಳ್ಳಲು ಹಾಗೂ ಕ್ರ. ಸಂ. 4, 7, 9 10 11, 12 ಮತ್ತು 13 ರಲ್ಲಿನ ಕಾಮಗಾರಿಗಳನ್ನು ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರುರವರ ಮೂಲಕ ಕೈಗೊಳ್ಳಲು ನಿಯಮಾನುಸಾರ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕೆಂಬ ಷರತ್ತಿಗೊಳಪಡಿಸಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಿದೆ.

(RS. In lakhs)

| Sl. No | Name of the work | Estimated Cost | NABARD approved Project cost | NABARD Share | Govt. Of Karnataka Share |
|---|---|---|---|---|---|
| 1 | Repairs to existing ponds, construction of Borewell with pump installation at Gopalpura fish farm | 100.00 | 91.00 | 86.45 | 4.55 |
| 2 | Proposed Conversion of Earthen Ponds to Masonry Ponds 15 No.s in Nugu Fish Farm | 200.00 | 188.00 | 178.6 | 9.4 |
| 3 | Proposed Conversion of Earthen Ponds to Masonry Ponds 10 No.s in Kabini Fish Farm | 200.00 | 189.50 | 180.025 | 9.475 |
| 4 | Construction of RCC Lining to fish ponds, fencing, main water supply and hatchery construction Road and Drainage works to Shivapura fish farm | 340.00 | 340.00 | 323 | 17 |
| 5 | Estimate for restoration of Harangi Fish Farm drain and pipe line works | 200.00 | 200.00 | 190 | 10 |
| 6 | Estimate for Construction of Fish Ponds Roads Compound, Hatchery works at Mensinahalli caomp | 100.00 | 100.00 | 95 | 5 |

-3-

| | | | | | |
|---|---|---|---|---|---|
| 7 | Estimate for Repair and Renovation of Narayanapura Fish Farm | 300.00 | 300.00 | 285 | 15 |
| 8 | Estimate for Development works at B.R. Project Fish Farm | 100.00 | 100.00 | 95 | 5 |
| 9 | Construction of Fish Market in Indi | 100.00 | 100.00 | 95 | 5 |
| 10 | Construction of Fish Market Chantharu | 100.00 | 100.00 | 95 | 5 |
| 11 | Construction of Fish Markets at Siraguppa | 100.00 | 100.00 | 95 | 5 |
| 12 | Construction of Fish Markets Sindanur | 100.00 | 100.00 | 95 | 5 |
| 13 | Construction of Fish Markets Yadgir | 100.00 | 100.00 | 95 | 5 |
| 14 | Construction of Fish landing/Berthing basin for traditional craft at Bengre side of Manglore fishing harbour | 340.00 | 337.00 | 320.15 | 16.85 |
| 15 | Extension of Jetty near Bobbarya pade | 130.00 | 130.00 | 123.5 | 6.5 |
| 16 | Construction of Auction Hall & Development of infrastructure at Hangarkatte Udupi Taluk & Dist, Kundapura Constituency | 120.00 | 101.00 | 95.95 | 5.05 |
| | **TOTAL OF ALL** | **2630.00** | **2576.50** | **2447.675** | **128.825** |

ಸದರಿ ಕಾಮಗಾರಿಗಳಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "4405-ಮೀನುಗಾರಿಕೆ ಮೇಲಿನ ಬಂಡವಾಳ ವೆಚ್ಚ-00-800-ಇತರೆ ವೆಚ್ಚಗಳು-02-ರಸ್ತೆಗಳು-03-ಮೀನುಗಾರಿಕೆ ಕೂಡು ರಸ್ತೆಗಳ, ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ ನಬಾರ್ಡ್ ಸಹಾಯ (ಗ್ರಾ.ಮೂ.ಸೌ.ಅ.ನಿ.)-436-ನಬಾರ್ಡ್ ಕಾಮಗಾರಿಗಳು(ಯೋಜನೆ)(4405-00-800-2-03-436)" ಅಡಿಯಲ್ಲಿ 2018-19ನೇ ಸಾಲಿನಲ್ಲಿ ಒದಗಿಸಿರುವ ಹಾಗೂ ನಂತರದ ವರ್ಷಗಳಲ್ಲಿ ಒದಗಿಸುವ ಅನುದಾನದಿಂದ ಭರಿಸತಕ್ಕದ್ದು.

ಕ್ರಮ ಸಂಖ್ಯೆ 1, 2, 3, 5, 6 ಮತ್ತು 8ರ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೂಲಭೂತ ಸೌಕರ್ಯ ಅಭಿವೃದ್ಧಿ ನಿ., ಬೆಂಗಳೂರು ಇವರು ಹಾಗೂ ಕ್ರಮ ಸಂಖ್ಯೆ 4, 7, 9, 10, 11, 12 ಮತ್ತು 13 ರಲ್ಲಿನ ಕಾಮಗಾರಿಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಮಂಗಳೂರು ಇವರು ಸಲ್ಲಿಸುವ ಪೇಯೀಸ್ ರಸೀದಿಗೆ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಮೇಲು ರುಜು ಮಾಡಿ ಖಜಾನೆಯಿಂದ ಸೆಳೆಯಲು ಮತ್ತು ಸದರಿ ಸಂಸ್ಥೆಗಳಲ್ಲಿ ಅನುದಾನ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಠೇವಣಿ ಇಡಲು ಅನುಮತಿ ನೀಡಲಾಗಿದೆ.

ಮೇಲ್ಕಂಡ ಕಾಮಗಾರಿಗಳ ಅನುಷ್ಠಾನವನ್ನು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ 2000 ಹಾಗೂ ಅದರಡಿಯಲ್ಲಿನ ನಿಯಮ ಮತ್ತು ಸೂಚನೆಗಳನ್ನು ಪಾಲಿಸಿ ಕೈಗೊಳ್ಳತಕ್ಕದ್ದು.

ಮೇಲ್ಕಂಡ ಕಾಮಗಾರಿಗಳ ಅಂದಾಜುಗಳಿಗೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ/4/ಟಿಎಫ್‌ಪಿ/2018, ದಿನಾಂಕ: 08-01-2018 ರಲ್ಲಿ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ವಿತ್ತಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀಮುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಸಂಬಂಧಪಟ್ಟ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
5) ಮೀನುಗಾರಿಕೆ ಜಂಟಿ ನಿರ್ದೇಶಕರು, ಮೀನುಗಾರಿಕೆ ಬಂದರುಗಳು, ಮಲ್ಪೆ.

-5-

6) ಜನರಲ್ ಮ್ಯಾನೇಜರ್, ನಬಾರ್ಡ್ ಟವರ್, 46, ಕೇಂಪೇಗೌಡ ರಸ್ತೆ, ಬೆಂಗಳೂರು.
7) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿ., ಮಂಗಳೂರು.
8) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ-ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿ. (ಕೆ.ಆರ್.ಐ.ಡಿ.ಎಲ್.), ಬೆಂಗಳೂರು.
9) ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11) ಸಂಬಂಧಪಟ್ಟ ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
12) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
13) ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
14) ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
15) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.